**Spl.C.(Corruption)/03/2016**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂಃ** 4

**ಪಿ ಡಬ್ಲೂಃ** 3

| | |
|---|---|
| ಸಾಕ್ಷಿಯ ಹೆಸರು - | ಪಂಪಾಪತಿ ನಾಯಕ |
| ತಂದೆಯ ಹೆಸರು - | ಶೇಖರ ನಾಯಕ |
| ವಯಸ್ಸು - | 55 ವರ್ಷ |
| ಉದ್ಯೋಗ - | ಸಿ ಎ ಓ, ಪಟ್ಟಣ ಪಂಚಾಯತಿ, ಕೂಡ್ಲಗಿ |
| ವಾಸಸ್ಥಳ - | ಹೂವಿನ ಹಡಗಲಿ |

**ಸಾಕ್ಷಿಯನ್ನು ದಿನಾಂಕಃ 07-03-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಪಿ. ಪಿ. ಅವರಿಂದ**

2015 ರಲ್ಲಿ ನಾನು ಕೊಟ್ಟೂರು ಪಟ್ಟಣ ಪಂಚಾಯತಿಯಲ್ಲಿ ಮುಖ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾಗ ಲೋಕಾಯುಕ್ತ ಪೋಲಿಸರು ಆರೋಪಿತನ ಸಂಬಂಧ ಸೇವಾ ವಿವರಗಳನ್ನು ಒದಗಿಸುವಂತೆ ಕೋರಿಕೊಂಡ ಹಿನ್ನೆಲೆಯಲ್ಲಿ ಕಚೇರಿಯಲ್ಲಿ ಲಭ್ಯವಿದ್ದ ದಾಖಲೆಗಳನ್ನು ಒದಗಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು, ಅದನ್ನು ನಿಪಿಃ 12 ಎಂದು, ಸಹಿಯನ್ನು ನಿಪಿಃ 12 (ಎ) ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿಯನ್ನು ಗುರುತಿಸಿದ್ದಾರೆ.

ಪಿರ್ಯಾದಿಗೆ ಸಂಬಂಧಪಟ್ಟ ಅರ್ಜಿ ವಿಲೆ ಬಾಕಿ ಇದ್ದ ಬಗ್ಗೆ ಮಾಹಿತಿ ಕೇಳಿದ್ದು, ರೂ. 500/- ಮುಟೇಷನ್ ಶುಲ್ಕ ಖಾತೆ ಬದಲಾವಣೆಗೆ ಬಾಕಿ ಇದ್ದ ಬಗ್ಗೆ ವರದಿ ನೀಡಿರುತ್ತೇನೆ. ಅದನ್ನು ನಿಪಿಃ 13 ಎಂದು, ಸಹಿಯನ್ನು ನಿಪಿಃ 13 (ಎ) ಎಂದು (ಪುಟ ಸಂಖ್ಯೆಃ 221 ರಿಂದ 231(ಎ)) ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಎನ್ ಎಂ., ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಸಕಾರಣವಿಲ್ಲದ ಕಾರಣ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.